2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 34/2024</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ವಿನೋದ ಎಸ್. | | ಪಿಡಬ್ಲೂ -02 |
| ಗಂಡನ ಹೆಸರು | - ಶಂಕರ | | ಸಿಡಬ್ಲೂ -02 |
| ವಯಸ್ಸು | - 26 ವರ್ಷ | | |
| ಉದ್ಯೋಗ | - ಸೂಪರ್ ವೈಸರ್, ನಿಡುವಾಳೆ ಎಸ್ಟೇಟ್ | | |
| ವಾಸ ಸ್ಥಳ | - ವಾಟೇಖಾನ್ ಗ್ರಾಮ | | |

ದಿನಾಂಕಃ 06.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಈ ಪ್ರಕರಣದ ಆರೋಪಿತರ ಗೊತ್ತು. ಆರೋಪಿತರು ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ಚಾಸಾ.1 ನಮ್ಮ ಎಸ್ಟೇಟಿನ ಮ್ಯಾನೇಜರ್ ಆಗಿದ್ದಾರೆ. ಚಾಸಾ.3 ಮತ್ತು 8 ನನ್ನ ಸಹೋದ್ಯೋಗಿಗಳು. ಚಾಸಾ.4 ರಿಂದ 7 ನಮ್ಮ ಎಸ್ಟೇಟಿನ ಕೂಲಿ ಕಾರ್ಮಿಕರು. ನಾನು ಟಾಟಾ ಕಾಫಿ ಎಸ್ಟೇಟಿನಲ್ಲಿ ಕಳೆದ ಐದು ವರ್ಷಗಳಿಂದ ಸೂಪರ್ ವೈಸರ್ ಕೆಲಸ ಮಾಡಿಕೊಂಡಿದ್ದೇನೆ. ನಾನು ವಾಟೇಖಾನ್ ಗ್ರಾಮದ ನಿವಾಸಿಯಾಗಿದ್ದು ಪ್ರತಿದಿನ ಟಾಟಾ ಕಾಫಿ ಎಸ್ಟೇಟಿಗೆ ಕೆಲಸಕ್ಕೆ ಬೈಕಿನಲ್ಲಿ ಅರ್ಧ ಗಂಟೆಯಲ್ಲಿ ಹೋಗಿಬರುತ್ತೇನೆ.

2. ನಮ್ಮ ಕಾಫಿ ಎಸ್ಟೇಟಿನಲ್ಲಿ ಕೂಲಿ ಲೈನ್ ಇದೆ. ನಮ್ಮ ಕಾಫಿ ಎಸ್ಟೇಟಿನಲ್ಲಿ ಜಾರ್ಖಂಡ್ ಮತ್ತು ಅಸ್ಸಾಂ ಮೂಲಕದ ಕೂಲಿ ಕಾರ್ಮಿಕರು ಇದ್ದಾರೆ. ಆರೋಪಿತರು ಜಾರ್ಖಂಡ್ ರಾಜ್ಯ ದವರು. ನಾನು ಕೆಲಸಕ್ಕೆ ಸೇರಿದ ನಂತರ ಆರೋಪಿತರು ನಮ್ಮ ಎಸ್ಟೇಟಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಆರೋಪಿತರು ನಮ್ಮ

ಎಸ್ಟೇಟಿನ ಕೂವೆ ಗ್ರಾಮದ ವ್ಯಾಪ್ತಿಯಲ್ಲಿ ಕೂಲಿಲೈನಿನಲ್ಲಿ ಒಟ್ಟಿಗೆ ವಾಸವಿದ್ದರು. ಆರೋಪಿತರ ಜೊತೆ ಒಂದು ಗಂಡು ಮಗು ಸುಮಾರು ಮೂರು ವರ್ಷ ಪ್ರಾಯದ್ದು ವಾಸವಿತ್ತು.

3. 1 ನೇ ಆರೋಪಿ ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ. 2 ನೇ ಆರೋಪಿ ಕೂಲಿ ಕೆಲಸಕ್ಕೆ ಬರುವವರ ಮಕ್ಕಳು ಮತ್ತು ಆಕೆಯ ಮಗುವನ್ನು ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದಳು.

4. ದಿಃ 18.12.2023 ರಂದು ನಾನು ಕೂವೆ ಗ್ರಾಮದ ಎಸ್ಟೇಟಿಗೆ ಬೆಳಿಗ್ಗೆ 7.30 ಗಂಟೆಗೆ ಬಂದೆ. ಎಂದಿನಂತೆ ನಾನು ಕೂಲಿಯಾಳುಗಳನ್ನು ಬೇರೆ ಬೇರೆ ಗುಂಪುಗಳಾಗಿ ಪ್ರತ್ಯೇಕಿಸಿ ಕೆಲಸಕ್ಕೆ ಕಳುಹಿಸಬೇಕಾಗಿತ್ತು. ಚಾಸಾ.5 ನಾಗಮ್ಮಳನ್ನು ತೋಟದ ಒಳಗಿನ ಕಳೆ ಹೊಡೆಯುವ ಕೆಲಸಕ್ಕೆ ಬಿಟ್ಟಿದ್ದೆ. ಅಂದು ಮದ್ಯಾಹ್ನ 3.00 ಗಂಟೆ ಸಮಯಕ್ಕೆ ಚಾಸಾ.5 ರವರು ಚಾಸಾ.8 ರವರಿಗೆ ಕರೆ ಮಾಡಿ 2 ನೇ ಆರೋಪಿಯೊಂದಿಗಿದ್ದ ಮಗು ಪ್ರಜ್ಞೆ ತಪ್ಪಿದೆ ಎಂದು ತಿಳಿಸಿದರು. ನನಗೆ ಮತ್ತು ಚಾಸಾ.3 ರವರಿಗೆ ಚಾಸಾ.8 ರವರು ಕರೆ ಮಾಡಿ ಈ ವಿಚಾರ ತಿಳಿಸಿದರು.

5. ನಾನು ಮತ್ತು ಚಾಸಾ.3 ಮತ್ತು ಚಾಸಾ.8 ರವರು ಸೇರಿ ಕೂವೆ ಗ್ರಾಮದ ನಮ್ಮ ಎಸ್ಟೇಟಿಗೆ ಹೋದೆವು. ಅಲ್ಲಿ ಎರಡನೇ ಆರೋಪಿ ಯೊಂದಿಗಿದ್ದ ಶಿವಕುಮಾರ ಎಂಬ ಮಗು ಪ್ರಜ್ಞೆ ತಪ್ಪಿತ್ತು. ಮಗುವನ್ನು ಮುಟ್ಟಿ ನೋಡಿದಾಗ ಮೈ ಸ್ವಲ್ಪಮಟ್ಟಿಗೆ ಬಿಸಿ ಇತ್ತು. ನಾವು ಚಾಸಾ.5 ರವರನ್ನು ವಿಚಾರಿಸಿದಾಗ 1 ಮತ್ತು 2 ನೇ ಆರೋಪಿತರು ಮದ್ಯಾಹ್ನದಿಂದಲೂ ಪ್ರಜ್ಞೆ ತಪ್ಪಿದ ಮಗುವನ್ನು ಹುಡುಕಾಡುತ್ತಿದ್ದರು ಎಂದು ತಿಳಿಸಿದಳು. ಆರೋಪಿತರು ಚಾಸಾ.5 ರವರ ಬಳಿ ಮಗುವಿನ ಬಗ್ಗೆ ವಿಚಾರಿಸಿದ್ದರು ಎಂತಲೂ

ತಿಳಿಸಿದ್ದಳು. ಅದೇ ದಿನ ಮದ್ಯಾಹ್ನ 1 ನೇ ಆರೋಪಿ ಕೂವೆ ಎಸ್ಟೇಟಿನ ಬಂಗಲೆ ಕಡೆಯಿಂದ ಸದರಿ ಮಗುವನ್ನು ನಡೆಸಿಕೊಂಡು ಬರುತ್ತಿದ್ದ ಎಂದು ತಿಳಿಸಿದಳು. ಮಗುವಿನ ಬಟ್ಟೆ ಗಲೀಜು ಆಗಿತ್ತು, ಮಗು ಮಲವಿಸರ್ಜನೆ ಮಾಡಿಕೊಂಡಿತ್ತು, ಗಾಬರಿಯಲ್ಲಿತ್ತು ಎಂದು ಚಾಸಾ.5 ತಿಳಿಸಿದಳು.

6. ನಂತರ 2 ನೇ ಆರೋಪಿ ಮಗುವಿನ ಬಟ್ಟೆ ಬದಲಾಯಿಸಿ ಸ್ನಾನ ಮಾಡಿಸಿದಾಗ, 1 ನೇ ಆರೋಪಿ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ಹೇಳುತ್ತಿದ್ದ ಎಂದು ಚಾಸಾ.5 ನನಗೆ ತಿಳಿಸಿದರು. 1 ನೇ ಆರೋಪಿ ಮಗುವನ್ನು ವಾಪಸ್ಸು ಕರೆತಂದಾಗ ಮಗುವಿಗೆ ಪ್ರಜ್ಞೆ ಇರಲಿಲ್ಲ ಎಂತಲೂ ತಿಳಿಸಿದಳು.

7. ನಂತರ ನಾನು ಮತ್ತು ಚಾಸಾ.3 ರವರು ಸದರಿ ಮಗುವನ್ನು ಬೈಕಿನಲ್ಲಿ ನಿಡುವಾಳೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆರೋಪಿತರಿಗೆ ಯಾವುದಾದರೂ ಆಟೋ ಸಿಕ್ಕಿದಲ್ಲಿ ನಮ್ಮನ್ನು ಹಿಂಬಾಲಿಸುವಂತೆ ತಿಳಿಸಿದೆವು. ನಿಡುವಾಳೆ ಆಸ್ಪತ್ರೆಯಲ್ಲಿ ವೈದ್ಯರು ಇರಲಿಲ್ಲ. ಅಷ್ಟರಲ್ಲಿ ಆರೋಪಿತರಿಬ್ಬರು ಆಸ್ಪತ್ರೆಯ ಬಳಿ ಬಂದರು. ಚಾಸ.1 ರವರು ಜೀಪಿನಲ್ಲಿ ಬಂದರು. ನಾವು ಮತ್ತು ಆರೋಪಿತರು ಸೇರಿ ಮಗುವನ್ನು ಚಾಸಾ.1 ರವರ ಜೀಪಿನಲ್ಲಿ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮಗುವನ್ನು ಪರಿಶೀಲಿಸಿದ ವೈದ್ಯರು ಮಗು ಮರಣಹೊಂದಿದೆ ಎಂದು ತಿಳಿಸಿದರು. ನಾವು ಈ ವಿಚಾರವನ್ನು ಚಾಸಾ.1 ರವರಿಗೆ ತಿಳಿಸಿದೆವು. ನಂತರ ನಾವು ಈ ವಿಚಾರವನ್ನು ಬಾಳೂರು ಪೋಲೀಸರಿಗೆ ತಿಳಿಸಿದೆವು. ಮಗುವಿನ ಶವವನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿದ್ದರು.

8. ದಿಃ 19.12.2023 ರಂದು ನಾನು ಮತ್ತು ಚಾಸಾ.3 ಮತ್ತು 4 ರವರು, ಆರೋಪಿ ಸೇರಿ ಬೆಳಿಗ್ಗೆ 8.00 ಗಂಟೆಗೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಹೋದೆವು. ಮಗುವಿನ ಶವ ತನಿಖೆಗೆ ನಮ್ಮನ್ನು ಕರೆದುಕೊಂಡು ಹೋದರು. ಮಗುವಿನ ಶವ ಪರೀಕ್ಷಿಸಿದಾಗ ಕುತ್ತಿಗೆಯ ಭಾಗದಲ್ಲಿ ಕೈಯಿಂದ ಅಮುಕಿದ ಗುರುತು ಕಂಡುಬರುತ್ತಿತ್ತು. ಮಗುವಿನ ಮೈಮೇಲೆ ಟೀಶರ್ಟು ಹಾಗೂ ಜೀನ್ಸಪ್ಯಾಂಟು ಇತ್ತು. ಮಗುವಿನ ಬಲಗೈಯಲ್ಲಿ ಒಂದು ಸಣ್ಣ ಗಾಯ ಕಂಡುಬಂತು. ಪೋಲೀಸರು ಶವ ತನಿಖೆ ಮಾಡಿದರು. ಪೋಲೀಸರು ನಮಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಶವತನಿಖೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

9. ಪೋಲೀಸರು ಮಗುವಿನ ಸಾವಿನ ಕಾರಣ ಕುರಿತು ನಮ್ಮನ್ನು ವಿಚಾರಿಸಿದರು. ನಾನು ಮೇಲೆ ಹೇಳಿದಂತೆ ನನಗೆ ತಿಳಿದುಬಂದ ವಿಚಾರವನ್ನು ಪೋಲೀಸರಿಗೆ ತಿಳಿಸಿದ್ದೇನೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಮಗುವಿನ ಮೃತದೇಹದ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.7 ರಿಂದ 10 ಎಂದು ಗುರುತಿಸಲಾಗಿದೆ.

10. ದಿಃ 23.12.2023 ರಂದು ಪೋಲೀಸರು ಪುನಃ ನನ್ನನ್ನು ಠಾಣೆಗೆ ಕರೆದಿದ್ದರು. ಮರಣ ಹೊಂದಿದ ಮಗು 1 ನೇ ಆರೋಪಿಯ ಮಗುವಲ್ಲ ಎಂಬ ವಿಚಾರ ನನಗೆ ತಿಳಿಯಿತು. ಈ ಬಗ್ಗೆ ನಾನು ಪೋಲೀಸರಲ್ಲಿ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

11. ದಿಃ 23.12.2023 ಕ್ಕೆ ಪೋಲೀಸ್ ಠಾಣೆಗೆ ಬೇಟಿ ನೀಡಿದಾಗ ಮೃತಪಟ್ಟ ಮಗು 2 ನೇ ಆರೋಪಿಯ ಮೊದಲ ಗಂಡನಿಂದ ಜನಿಸಿದ ಮಗುವಾಗಿದ್ದು 1 ನೇ ಆರೋಪಿಗೆ ಮಗು ಅವರೊಂದಿಗೆ ಇದ್ದಲ್ಲಿ ತಮ್ಮ ಜೀವನ ನಿರ್ವಹಣೆ ಕಷ್ಟಕರವಾಗುತ್ತದೆ ಎಂದು ಮಗುವಿನ ಮೇಲೆ 1 ನೇ ಆರೋಪಿಗೆ ಮಮತೆ ಇರಲಿಲ್ಲ ನಮಗೆ ತಿಳಿದುಬಂದಿತ್ತು ಎಂದರೆ ನಿಜ. 1 ನೇ ಆರೋಪಿಯಿಂದ 2 ನೇ ಆರೋಪಿ ಗರ್ಭಿಣಿ ಆಗಿರುವ ವಿಚಾರ ಕೂಡ ನಮಗೆ ಠಾಣೆಗೆ ಹೋದಾಗ ತಿಳಿದುಬಂದಿತ್ತು ಎಂದರೆ ನಿಜ. ಈ ಬಗ್ಗೆ ನಾನು ಪೋಲೀಸರಲ್ಲಿ ಮುಂದುವರೆದ ಹೇಳಿಕೆ ನೀಡಿದ್ದೇನೆ ಎಂದರೆ ನಿಜ.

<u>ಪಾಟೀ ಸವಾಲುಃ**ಶ್ರೀ.ಎನ್.ಡಿ.**(ಎಲ್.ಎ.ಡಿ.ಸಿ.ಎಸ್.)**,** ವಕೀಲರಿಂದ ಆರೋಪಿತರ ಪರವಾಗಿ</u>

12. ನಾನು ಘಟನೆ ನಡೆದ ಸಮಯದಲ್ಲಿ ಹಂಗಾಮಿ ನೌಕರನಾಗಿ ಟಾಟಾ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಎಸ್ಟೇಟಿನ ಕೂಲಿ ಲೈನಿನಲ್ಲಿ ಕೂಲಿಗಾರರ ಹಾಜರಾತಿ ಮತ್ತು ಕೂಲಿ ಬಟವಾಡೆ ಪುಸ್ತಕ ಇಡಲಾಗಿದೆ. ಕೂಲಿಯಾಳುಗಳ ಗುರುತುಪತ್ರ / ಆಧಾರಕಾರ್ಡು ಇತ್ಯಾದಿ ಪಡೆದ ನಂತರ ಒಂದು ಪ್ರತ್ಯೇಕ ರಿಜಿಸ್ಟರನ್ನು ಇಡಲಾಗುತ್ತದೆ. ಕೂಲಿಯಾಳುಗಳು ಬೆಳಿಗ್ಗೆ 7.30 ರಿಂದ ಸಂಜೆ 4.30 ವರೆಗೆ ಕೆಲಸ ಮಾಡುತ್ತಾರೆ. ಮದ್ಯಾಹ್ನ 12.30 ರಿಂದ 1.30 ರವರೆಗೆ ವಿರಾಮ ಇರುತ್ತದೆ. ವಿರಾಮದ ಸಮಯದಲ್ಲಿ ಕೂಲಿಯಾಳುಗಳ ಹಾಜರಾತಿ ಪಡೆಯುವುದಿಲ್ಲ.

13. ಘಟನೆ ನಡೆದ ಸಮಯದಲ್ಲಿ ನಮ್ಮ ಎಸ್ಟೇಟಿನಲ್ಲಿ ಸುಮಾರು 30-35 ಜನ ಕೂಲಿಯಾಳುಗಳು ಇದ್ದರು. ನಮ್ಮ ಎಸ್ಟೇಟಿನಲ್ಲಿ 30-35 ಕ್ಕಿಂತ ಹೆಚ್ಚು ಕೂಲಿಯಾಳುಗಳು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕೆಲಸಕ್ಕಾಗಿ ಕೂಲಿಕಾರರ ಗುಂಪುಗಳನ್ನು ರಚಿಸಿಲ್ಲ. ನಮ್ಮ ಎಸ್ಟೇಟಿನಲ್ಲಿ ಒಟ್ಟು 15-16 ಕೂಲಿ ಲೈನುಗಳಿವೆ. ಎಲ್ಲಾ ಕೂಲಿ ಲೈನುಗಳಲ್ಲಿ ಕೂಲಿ ಕಾರ್ಮಿಕರು ವಾಸವಿದ್ದಾರೆ. ಹೊರರಾಜ್ಯದಿಂದ ಬಂದ ಕೂಲಿಗಳು ಕೂಲಿ ಲೈನಿನಲ್ಲಿ ವಾಸವಿರುತ್ತಾರೆ. ಕೂಲಿ ಲೈನಿನಲ್ಲಿ ವಾಸ ಮಾಡುವ ಕೂಲಿ ಕಾರ್ಮಿಕರು ಆಗಾಗ ಕಿತ್ತಾಡುತ್ತಾರೆ ಎಂದರೆ ಸರಿಯಲ್ಲ.

14. ನಾನು ಸೂಪರ್ ವೈಸರ್ ಕೆಲಸ ಮಾಡಿಕೊಂಡಿದ್ದು ಕಾರ್ಮಿಕರಿಗೆ ಆಗುವ ತೊಂದರೆಗಳನ್ನು ನನಗಿಂತ ಮೇಲಿನವರ ಗಮನಕ್ಕೆ ತರುತ್ತೇನೆ. ನಮ್ಮ ಎಸ್ಟೇಟಿನಲ್ಲಿ ಕೂಲಿಗಳ ಮಧ್ಯೆ ಆಗಾಗ ಗಲಾಟೆಗಳಾಗಿ ವಿಚಾರ ಪೋಲೀಸ್ ಠಾಣೆ ತಲುಪಿರುವುದು ನನಗೆ ಗೊತ್ತಿದ್ದರೂ ಕೂಡ ಯಾವುದೇ ಗಲಾಟೆ ನಡೆದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಾನು ಹೇಳುವ ಘಟನೆ ನಡೆದ ದಿನ ಚಾಸಾ.5 ನಾಗಮ್ಮ ರವರನ್ನು ಅವಳ ಕೂಲಿ ಲೈನಿನ ಹತ್ತಿರ ಬಿಟ್ಟಿದ್ದೆ. ನಾಗಮ್ಮಳ ಜೊತೆ ಅಂದು ಬೇರೆ ಯಾರೂ ಇರಲಿಲ್ಲ. ನಮ್ಮ ಎಸ್ಟೇಟಿನಲ್ಲಿ ಕೂಲಿಗಳು ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ ಕೂಲಿಗಳು ಇರುತ್ತಾರೆ. ಕೂಲಿಗಳು ಎಲ್ಲಿ ಕೆಲಸ ನಿರ್ವಹಿಸಬೇಕೆಂದು ನಾವು ನಿರ್ಧರಿಸುತ್ತೇವೆ. ನಾವು ನಿರ್ಧರಿಸಿದ ಸ್ಥಳ ಹೊರತುಪಡಿಸಿ ಬೇರೆ ಕಡೆ ಅವರು ಕೆಲಸ ನಿರ್ವಹಿಸಲು ಅವಕಾಶ ಇರುವುದಿಲ್ಲ.

16. ನನಗೆ ಪೋನು ಕರೆ ಬಂದಾಗ ಮದ್ಯಾಹ್ನ 3.00 ಗಂಟೆ ಆಗಿತ್ತು. ನಾನು, ಚಾಸಾ.3 ಮತ್ತು ಚಾಸಾ.8 ಎರಡು ಬೈಕಿನಲ್ಲಿ ಹೋಗಿದ್ದೆವು. ಕೂವೆ ಗ್ರಾಮದ ಎಸ್ಟೇಟಿಗೆ ತಲುಪಲು 15 ನಿಮಿಷ ಬೇಕಾಗುತ್ತದೆ. ನನಗೆ ಬಂದ ಮಾಹಿತಿಯನ್ನು ತಕ್ಷಣ ಚಾಸಾ.1 ರವರಿಗೆ ನೀಡುವ ಪ್ರಯತ್ನ ಮಾಡಿರಲಿಲ್ಲ. ನಾನು ಪೋನು ಕರೆ ಸ್ವೀಕರಿಸಿದ ಸ್ಥಳದಿಂದ ಕೂವೆ ಗ್ರಾಮದ ಎಸ್ಟೇಟು ಮೂರು ಕಿಮೀ ಅಂತರದಲ್ಲಿದೆ.

17. ನಾನು ಮಗುವಿನ ಕೈ ಮುಟ್ಟಿ ಪರೀಕ್ಷಿಸಿದಾಗ ಸಂಜೆ 3.30-4.00 ಗಂಟೆ ಆಗಿರಬಹುದು. ಮಗುವಿನ ಕೈ ಮುಟ್ಟಿ ಪರೀಕ್ಷಿಸಿದ ಸಮಯದಲ್ಲಿ ನಾನು ಮಗುವಿನ ಕುತ್ತಿಗೆ ಭಾಗವನ್ನು ಪರೀಕ್ಷಿಸಿರಲಿಲ್ಲ. ನಮ್ಮ ಎಸ್ಟೇಟು ರಾಜ್ಯ ಹೆದ್ದಾರಿ 66 ಕ್ಕೆ ಹೊಂದಿ ಕೊಂಡಿದೆ. ಸದರಿ ರಾಜ್ಯ ಹೆದ್ದಾರಿ 66 ರಲ್ಲಿ ವಾಹನಗಳ ಸಂಚಾರ ಇರುತ್ತದೆ.

18. ನಮ್ಮ ಎಸ್ಟೇಟಿಗೆ ಹತ್ತಿರವಿರುವ ಆಸ್ಪತ್ರೆ ಎಂದರೆ ಮಾಗುಂಡಿ ಗ್ರಾಮದ ಸರ್ಕಾರಿ ಆಸ್ಪತ್ರೆ. ಅದನ್ನು ಹೊರತುಪಡಿಸಿದರೆ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆ ಹತ್ತಿರ ಇದೆ. ನಿಡುವಾಳೆ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಹೊರತುಪಡಿಸಿದರೆ ಖಾಸಗಿ ಆಸ್ಪತ್ರೆ ಇಲ್ಲ. ನಿಡುವಾಳೆಯಿಂದ ಮುಂದೆ ಬಣಕಲ್ ನಲ್ಲಿ ಸಮುದಾಯ ಆರೋಗ್ಯ ಕೇಂದ್ರ ಇದೆ. ಅಲ್ಲಿ ವೈದ್ಯರು ಇರುತ್ತಾರೆ.

19. ನಾವು ಮಗುವನ್ನು ಕರೆದುಕೊಂಡ ನಿಡುವಾಳೆ ತಲುಪಿದ 5-6 ನಿಮಿಷದಲ್ಲಿ ಆರೋಪಿತರು ಅಲ್ಲಿಗೆ ಬಂದರು. ನಿಡುವಾಳೆ ಆಸ್ಪತ್ರೆಯಲ್ಲಿ ವೈದ್ಯಕೀಯ ಸಿಬ್ಬಂದಿ ಕೂಡ ಇರಲಿಲ್ಲ. ಆಸ್ಪತ್ರೆ ಬಂದಾಗಿರಲಿಲ್ಲ. ಮೂಡಿಗೆರೆ ಆಸ್ಪತ್ರೆಯಲ್ಲಿ ಮಗು ಮರಣಹೊಂದಿದ ವಿಚಾರ ತಿಳಿದ ತಕ್ಷಣ ನಾನು ಚಾಸಾ.1

ರವರಿಗೆ ಕರೆ ಮಾಡಿ ತಿಳಿಸಿದ್ದೇನೆ. ಅಂದು ಸಂಜೆ 7.30-8.00 ಗಂಟೆ ಸಮಯಕ್ಕೆ ಬಾಳೂರು ಪೋಲೀಸರು ಮೂಡಿಗೆರೆ ಆಸ್ಪತ್ರೆಗೆ ಬೇಟಿ ನೀಡಿದ್ದರು. ಆದರೆ ಆ ಸಮಯದಲ್ಲಿ ಪೋಲಿಸರು ನಮ್ಮನ್ನು ವಿಚಾರಿಸಿರಲಿಲ್ಲ. ನಿಪಿ.7 ರಿಂದ 10ರ ಭಾವಚಿತ್ರಗಳನ್ನು ಪೋಲೀಸರು ಮರುದಿನ ಬೆಳಿಗ್ಗೆ 8.00 ರಿಂದ 11.00 ಗಂಟೆ ಸಮಯದಲ್ಲಿ ಸಂಗ್ರಹಿಸಿದ್ದಾರೆ. ಶವ ಪಂಚನಾಮೆ ಬರೆಯಲು ಪೋಲೀಸರಿಗೆ ನಾನು ಉಕ್ತಲೇಖನ ನೀಡಿಲ್ಲ. ನಿಪಿ.12 ಶವ ಪಂಚನಾಮೆಗೆ ಸಹಿ ಮಾಡಿದ್ದನ್ನು ಹೊರತು ಪಡಿಸಿದರೆ ಅದರಲ್ಲಿ ಬರೆದ ವಿಚಾರೆ ಗೊತ್ತಿಲ್ಲ.

20. ಎಸ್ಟೇಟಿನಲ್ಲಿ ಮೃತಪಟ್ಟ ಕಾರ್ಮಿಕರಿಗೆ ಪರಿಹಾರ ಕೊಡ ಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರ ಮಾತಿನ ಮೇರೆಗೆ ಮೃತ ಮಗುವಿಗೆ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವ ಘಟನೆ ನಡೆದ ದಿನ 1 ನೇ ಆರೋಪಿ ಕೂಲಿ ಕೆಲಸಕ್ಕೆ ಹಾಜರಾಗಿಲ್ಲ ಎಂದರೆ ನಿಜ. ದಿಃ 16.12.2023 ರಿಂದ 1 ನೇ ಆರೋಪಿ ಕೂಲಿ ಕೆಲಸಕ್ಕೆ ಹಾಜರಾಗಿಲ್ಲ ಎಂದರೆ ನಿಜ. ನಾನು ಹೇಳುವ ಘಟನೆ ನಡೆದ ದಿನ 1 ನೇ ಆರೋಪಿ ನಮ್ಮ ಕೂಲಿ ಲೈನಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮೃತ ಮಗುವಿನ ತಂದೆ ತಾಯಿ ಅಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ನಾವು ಚಾಸಾ.5 ರವರನ್ನು ವಿಚಾರಿಸಿದಾಗ 1 ಮತ್ತು 2 ನೇ ಆರೋಪಿತರು ಮದ್ಯಾಹ್ನದಿಂದಲೂ ಪ್ರಜ್ಞೆ ತಪ್ಪಿದ ಮಗುವನ್ನು ಹುಡುಕಾಡುತ್ತಿದ್ದರು ಎಂದು ತಿಳಿಸಿದಳು, ಆರೋಪಿತರು

ಚಾಸಾ.5 ರವರ ಬಳಿ ಮಗುವಿನ ಬಗ್ಗೆ ವಿಚಾರಿಸಿದ್ದರು ಎಂತಲೂ ತಿಳಿಸಿದ್ದಳು, ಅದೇ ದಿನ ಮಧ್ಯಾಹ್ನ 1 ನೇ ಆರೋಪಿ ಕೂವೆ ಎಸ್ಟೇಟಿನ ಬಂಗಲೆ ಕಡೆಯಿಂದ ಸದರಿ ಮಗುವನ್ನು ನಡೆಸಿಕೊಂಡು ಬರುತ್ತಿದ್ದ ಎಂದು ತಿಳಿಸಿದಳು, ಮಗುವಿನ ಬಟ್ಟೆ ಗಲೀಜು ಆಗಿತ್ತು, ಮಗು ಮಲವಿಸರ್ಜನೆ ಮಾಡಿಕೊಂಡಿತ್ತು, ಗಾಬರಿಯಲ್ಲಿತ್ತು ಎಂದು ಚಾಸಾ.5 ತಿಳಿಸಿದಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಂತರ 2 ನೇ ಆರೋಪಿ ಮಗುವಿನ ಬಟ್ಟೆ ಬದಲಾಯಿಸಿ ಸ್ನಾನ ಮಾಡಿಸಿದಾಗ, 1 ನೇ ಆರೋಪಿ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ಹೇಳುತ್ತಿದ್ದ ಎಂದು, ಚಾಸಾ.5 ನನಗೆ ತಿಳಿಸಿದರು. 1 ನೇ ಆರೋಪಿ ಮಗುವನ್ನು ವಾಪಸ್ಸು ಕರೆತಂದಾಗ ಮಗುವಿಗೆ ಪ್ರಜ್ಞೆ ಇರಲಿಲ್ಲ ಎಂತಲೂ ತಿಳಿಸಿದಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ನಂತರ ನಾನು ಮತ್ತು ಚಾಸಾ.3 ರವರು ಸದರಿ ಮಗುವನ್ನು ಬೈಕಿನಲ್ಲಿ ನಿಡುವಾಳೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಯಾವುದಾದರೂ ಆಟೋ ಸಿಕ್ಕಿದಲ್ಲಿ ನಮ್ಮನ್ನು ಹಿಂಬಾಲಿಸುವಂತೆ ತಿಳಿಸಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡುವಾಳೆ ಆಸ್ಪತ್ರೆಯಲ್ಲಿ ವೈದ್ಯರು ಇರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಆರೋಪಿತರಿಬ್ಬರು ಆಸ್ಪತ್ರೆಯ ಬಳಿ ಬಂದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸ.1 ರವರು ಜೀಪಿನಲ್ಲಿ ಬಂದರು, ನಾವು ಮತ್ತು ಆರೋಪಿತರು ಸೇರಿ ಮಗುವನ್ನು ಚಾಸಾ.1 ರವರ ಜೀಪಿನಲ್ಲಿ

ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ನಿಡುವಾಳೆ ಆಸ್ಪತ್ರೆಯಿಂದ ಮೂಡಿಗೆರೆ ಆಸ್ಪತ್ರೆಯವರೆಗೆ ಚಾಸಾ.1 ರವರು ಜೀಪನ್ನು ಚಾಸಾ.3 ರವರು ಚಾಲನೆ ಮಾಡಿದರು. ಅಂದು ರಾತ್ರಿ 9.30 ಗಂಟೆಗೆ ವಾಪಸ್ಸು ಬಂದಿದ್ದೆವು. ನಮ್ಮ ದ್ವಿಚಕ್ರ ವಾಹನವನ್ನು ಎಸ್ಟೇಟಿನಲ್ಲಿ ನಿಲ್ಲಿಸಿ ಹೋಗಿದ್ದೆವು. 2 ನೇ ಆರೋಪಿಗೆ ಮೊದಲನೇ ಗಂಡ ಬೇರೆ ಇರಲಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಎರಡನೇ ಆರೋಪಿಗೆ ಮೊದಲ ಗಂಡನಿಂದ ಮೃತ ಮಗುವಾಗಿತ್ತು ಎಂದು ಪೋಲೀಸರು ನನಗೆ ತಿಳಿಸಿದರು ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ